**<u>ಹೆಚ್ಚುವರಿ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ  ನಂ. 1719/2022**

| | | | |
|---|---|---|---|
| **ಹೆಸರು** | **:** | **ಸಂಜೀವ ಪವರ** | **ಚಾ.ಸಾ.1** |
| **ತಂದೆಯ  ಹೆಸರು** | **:** | **ಬದ್ದು ನಾಯಕ** | **ಪ್ರಾ.ಸಾ.1** |
| **ವಯಸ್ಸು** | **:** | **37 ವರ್ಷ** | **ದಿನಾಂಕಃ 28-02-2024** |
| **ಉದ್ಯೋಗ** | **:** | **ಉಪವಲಯ ಅರಣ್ಯಾಧಿಕಾರಿ** | |
| **ವಾಸಸ್ಥಳ** | **:** | **ಚಿತ್ತಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-2 ರಿಂದ 8 ರವರು ನನಗೆ ಗೊತ್ತು.

ದಿನಾಂಕ 17-11-2019 ರಂದು ಮಧ್ಯಾಹ್ನ 3.30 ಗಂಟೆ ಸುಮಾರಿಗೆ ಶೇಖರ ತಂದೆ ಗಂಗಣ್ಣರವರ ಜಿಂಕೆ ಮಾಂಸವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದಾನೆ ಎಂದು ಖಚಿತ ಮಾಹಿತಿ ಬಂದ ಮೇರೆಗೆ ನಾವು ಅರಣ್ಯ ಸಿಬ್ಬಂದಿಗಳು ಸದರಿ ವ್ಯಕ್ತಿಗೆ ಹಿಡಿಯಲು ಎರಡು ಗುಂಪುಗಳನ್ನು ಮಾಡಿ ಒಂದು ಗುಂಪಲ್ಲಿ ನಾನು, ಚಾಸಾ-2 ಮತ್ತು 3 ರವರು ಹಾಗೂ ಇನ್ನೊಂದು ಗುಂಪಿನಲ್ಲಿ ಚಾಸಾ-4 ರಿಂದ 6 ರವರು ಇರುತ್ತಾರೆ. ನನ್ನ ತಂಡ ಮಂಬಾಪುರ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದು ಹಾಗೂ ಇನ್ನೊಂದು ತಂಡ ಲಕ್ಷ್ಮಿಸಾಗರ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದು ನಮ್ಮ ತಂಡ ಗಸ್ತು ಮಾಡುತ್ತಿದ್ದ  ಮ್ಯಾಕಲ್ ಬಂಡ ಎಂಬ ಸ್ಥಳದಲ್ಲಿ ಅಂದಾಜು 50 ಮೀಟರ ಅಂತರದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ನಮ್ಮ ಎದುರಿಗೆ ಬಂದಿರುತ್ತಾನೆ. ಆಗ ಅವನ ಹತ್ತಿರ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವಿದ್ದು ನಮಗೆ ನೋಡಿ ಗಾಭರಿಗೊಂಡು ತನ್ನ ಹತ್ತಿರವಿದ್ದ ಚೀಲವನ್ನು ಅಲ್ಲೇ ಬಿಸಾಕಿ ಓಡಿ ಹೊಗಿರುತ್ತಾನೆ. ನಾವು ಸದರಿ ಆರೋಪಿಗೆ ಹಿಡಿಯಲು ಬೆನ್ನಟ್ಟಿದಾಗ ಅವನು ನಮಗೆ ಸಿಕ್ಕಿರುವುದಿಲ್ಲ.

ನಂತರ ನಾವು ಲಕ್ಷ್ಮಿಸಾಗರದಲ್ಲಿರುವ ಇನ್ನೋಂದು ತಂಡದವರಿಗೆ ಕರೆ ಮಾಡಿ ನಮ್ಮ ಹತ್ತಿರ ಕರೆಸಿ ಸದರಿ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಚಿಪ್ಪು ಇರುವ ಸುತ್ತಿದ ಒಂದು ಪ್ರಾಣಿ ದೊರೆತಿರುತ್ತದೆ. ಸದರಿ ಪ್ರಾಣಿ ನನ್ನ ಸೇವ ಅನುಭವದಿಂದ ಚಿಪ್ಪು ಹಂದಿ ಅಥವಾ Pangolin ಎಂದು ನಾನು ಗುರುತಿಸಿರುತ್ತೇನೆ. ಈಗ ನೋಡುತ್ತಿರುವ ಭಾವಚಿತ್ರದಲ್ಲಿವ ಪ್ರಾಣಿ ಆ ದಿನ ನಮಗೆ ಸದರಿ

ಚೀಲದಲ್ಲಿ ಸಿಕ್ಕಿರುತ್ತದೆ. ಸಾಕ್ಷಿ ಗುರುತಿಸಿರುವ ಭಾವಚಿತ್ರವನ್ನು ನಿಪಿ-1 ಎಂದು ಗುರುತಿಸಲಾಯಿತು.

ಆರೋಪಿ ಸದರಿ ಪ್ರಾಣಿಯನ್ನು ಸಾಗಾಣೆ ಮಾಡುತ್ತಿದ್ದ ಕಾರಣ ಅವನ ವಿರುದ್ಧ ಪ್ರ.ವ.ವ.ಯನ್ನು ದಾಖಲಿಸಲು ಮುಂದಾಗಿರುತ್ತೇವೆ. ನಂತರ ಪ್ರ.ವ.ವ.ಯನ್ನು ದಾಖಲಿಸಿರುತ್ತೇವೆ. ಈಗ ನೋಡುತ್ತಿರುವ ಪ್ರ.ವ.ವರದಿ ನಾನೇ ದಾಖಲಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಲು ಮುಂದಾಗಿದ್ದು ಯಾವದೇ ಸಾರ್ವಜನಿಕರು ಸಿಕ್ಕಿರುವುದಿಲ್ಲ ಆದ್ದರಿಂದ ನಮ್ಮ ಸಿಬ್ಬಂದಿಯ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇನೆ. ಸಾಕ್ಷಿ ಗುರುತಿಸಿರುವ ಪಂಚನಾಮೆಯನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪಂಚರ ಸಮಕ್ಷಮ ನಿಶಕ್ತತೆಯಿಂದ ಕೂಡಿದ ಪಾಂಗೋಲಿನ ಪ್ರಾಣಿಯನ್ನು ಜಪ್ತಿ ಮಾಡಿರುತ್ತೇನೆ.

ಚಾಸಾ-3 ಮತ್ತು ಆರೋಪಿ ಒಂದೇ ಊರಿನವರಾದ ಕಾರಣ ಚಾಸಾ-3 ರವರು ಓಡಿಹೊದ ಆರೋಪಿಯನ್ನು ಗುರುತಿಸಿರುತ್ತಾರೆ. ಪಂಚರ ಸಮಕ್ಷಮ ಸ್ಥಳವನ್ನು ಮತ್ತೆ ಪರಿಶೀಲಿಸಿದಾಗ ಒಂದು ಕೋಲು ಸಹ ಸಿಕ್ಕಿರುತ್ತದೆ. ಸದರಿ ಕೋಲಿನಿಂದ ಪಾಂಗೋಲಿನ ಪ್ರಾಣಿಯನ್ನು ಭೂಮಿಯಿಂದ ತೆಗೆದಿರಬಹುದು ಎಂದು ಅಂದಾಜಿಸಿರುತ್ತೇವೆ. ನಾವು ಜಪ್ತಿ ಮಾಡಿದ ಪಾಂಗೋಲಿನ ಪ್ರಾಣಿ 1 ರಿಂ ದ 1.5 ಮೀಟರ ಉದ್ದವಿದ್ದು ಅಂದಾಜು 3 ರಿಂದ 4 ಕೆ.ಜಿ. ತೂಕವಿತ್ತು. ನಮ್ಮ ಸಮಕ್ಷಮ ಓಡಿಹೋದ ನ್ಯಾಯಾಲಯದ ಮುಂದೆ ಇರುವ ಆರೋಪಿ ಕೆಂಪು ಬಣ್ಣದ ಅಂಗಿ ಮತ್ತು ಕಪ್ಪು ಬಣ್ಣದ ಪ್ಯಾಂಟನ್ನು ದರಿಸಿದ್ದ. ಆ ಕಾಲಕ್ಕೆ ನಿಪಿ-3 ರ ಪಂಚನಾಮೆ ಸಾಯಂಕಾಲ 4.15 ರಿಂದ 5.30 ರವರೆಗೆ ಜರುಗಿಸಿ ನಂತರ ಸದರಿ ಪ್ರಾಣಿಯನ್ನು ಹಾಗೂ ಚೀಲ ಮತ್ತು ಕೋಲನ್ನು ನಮ್ಮ ಕಛೇರಿಗೆ ತೆಗೆದುಕೊಂಡು ಹೋಗಿರುತ್ತೇವೆ. ಅದೇ ದಿನ ಪ್ರ.ವ.ವರದಿ, ಪಂಚನಾಮೆ, ಜಪ್ತಿ ವರದಿ ಹಾಗೂ ದೂರನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ಗುರುತಿಸಿರುವ ದೂರನ್ನು ನಿಪಿ-4 ಎಂದು ಮತ್ತು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-4 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿರುವ ಜಪ್ತಿ ವರದಿಯನ್ನು ನಿಪಿ-5 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-5 (ಎ) ಎಂದು ಗುರುತಿಸಲಾಯಿತು.

ನಂತರ ಮರುದಿನ ನನ್ನ ಮೇಲಾಧಿಕಾರಿಗಳ ಮಾರ್ಗದರ್ಶನ ಪಡೆದು ಸದರಿ ಪಾಂಗೋಲಿನ ಪ್ರಾಣಿಯನ್ನು ಮಂಬಾಪುರ ಅರಣ್ಯ ಪ್ರದೇಶದಲ್ಲಿ ಸದರಿ ಪ್ರಾಣಿಯನ್ನು ಬಿಟ್ಟು ಆ ಕಾಲಕ್ಕೆ ಲಿಂಬು

ಪವರ ಹಾಗೂ ಮನ್ನು ರಾಠೋಡರವರ ಸಮಕ್ಷಮ ದಿನಾಂಕ 18-11-2019 ರಂದು ಸಾಯಂಕಾಲ 4 ಗಂಟೆ ಸುಮಾರಿಗೆ ಪಂಚನಾಮೆ ಮಾಡಿರುತ್ತೇವೆ. ಸಾಕ್ಷಿ ಸದರಿ ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ನಿಪಿ-6 ಎಂದು ಮತ್ತು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಂತರ ಸದರಿ ಘಟನೆ ಬಗ್ಗೆ ದಿನಾಂಕ 25-02-2022 ರಂದು ಘಟನೆ ಬಗ್ಗೆ ಚಾಸಾ-8 ರವರಿಗೆ ಹೇಳಿಕೆ ನೀಡಿದ್ದೇನೆ.

ದಿನಾಂಕ 25-05-2022 ರಂದು ಬೆಳಗ್ಗೆ 11 ಗಂಟೆಗೆ ಕುಂಚಾವರಂ ಗ್ರಾಮದಲ್ಲಿರುವ ನಮ್ಮ ಕಛೇರಿಯಲ್ಲಿ ಚಾಸಾ-8 ರವರು ಆರೋಪಿಯ ಹೇಳಿಕೆಯನ್ನು ಪಡೆದಾಗ ನನ್ನ ಸಮಕ್ಷಮ ಹಾಗೂ ಗೋಪಾಲ ಮತ್ತು ಶಹಬುದ್ದಿನರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಆಗ ಆರೋಪಿ ನಮ್ಮ ಸಮಕ್ಷಮ ತಾನು ರಾತ್ರಿ ಕಾಲಕ್ಕೆ ಜಿಂಕೆಯನ್ನು ಬೇಟೆಯಾಡಲು ಅರಣ್ಯ ಪ್ರದೇಶದಲ್ಲಿ ಬೆಂಡಿಂಗ್ ವೈಯರ ಹಾಕಿ ಅದರಲ್ಲಿ ವಿದ್ಯುತ ಬಿಟ್ಟಿದ್ದು ಅಷ್ಟುರಲ್ಲಿ ಅವನ ಹತ್ತಿರ ಇರುವ ಟಾರ್ಚ ಬೆಳಕಿನಲ್ಲಿ ಪಾಂಗೋಲಿನ ಪ್ರಾಣಿ ಅವನಿಗೆ ಸಿಕ್ಕಿದ್ದು ಅದನ್ನು ಮಾರಾಟ ಮಾಡುವ ಉದ್ದೇಶದಿಂದ ತನ್ನ ಹತ್ತಿರವಿದ್ದ ಚೀಲದಲ್ಲಿ ಹಾಕಿ ಅರಣ್ಯ ಪ್ರದೇಶದಲ್ಲಿಯೇ ಓಡಾಡುತ್ತಿರುವ ನಮ್ಮ ಹತ್ತಿರ ಸಿಕ್ಕಿಬಿದ್ದಿರುತ್ತಾನೆ ಎಂದು ತಿಳಿಸಿರುತ್ತಾನೆ. ಸಾಕ್ಷಿ ಗುರುತಿಸಿರುವ ಪಂಚನಾಮೆಯನ್ನು ನಿಪಿ-7 ಎಂದು ಮತ್ತು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಆರೋಪಿ ಸುಮಾರು ಪ್ರಕರಣಗಳಲ್ಲಿ ಇಂತಹ ಕೃತ್ಯ ಮಾಡುತ್ತಿದ್ದು ಈಗ 5 ತಿಂಗಳ ಹಿಂದೆ ಇನ್ನೊಂದು ಪ್ರಕರಣದಲ್ಲಿ ಭಾಗಿಯಾದ ಕಾರಣ ಅವನ ವಿರುದ್ದ ಬೇರೊಂದು ಪ್ರಕರಣ ಸಹ ದಾಖಲೆಯಾಗಿದೆ.

ಈಗ ನೋಡುತ್ತಿರುವ ಎರಡು ಭಾವಚಿತ್ರಗಳಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರಗಳನ್ನು ಪಾಂಗೋಲಿನ ಪ್ರಾಣಿಯನ್ನು ನಮ್ಮ ಕಛೇರಿಗೆ ಕರೆದೊಯಿದಾಗ ಪಡೆದುಕೊಂಡಿದ್ದೇನೆ. ಸದರಿ ಭಾವಚಿತ್ರಗಳನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಸ್ಥಳದಿಂದ ಆ ದಿನ ಆರೋಪಿ ನಮಗೆ ನೋಡಿ ಓಡಿ ಹೋಗಿರುತ್ತಾನೆ. ಸಾಕ್ಷಿ ಗುರುತಿಸಿರುವ ಭಾವಚಿತ್ರಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**